# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.04/2024**

**ದೋ.ಸಾ. : 04 ಪ್ರಾ.ಸಾ. : 07**

| | | |
|---|---|---|
| ಸಾಕ್ಷಿಯ ಹೆಸರು | : | ಪ್ರದೀಪ ಚಂದ್ರಶೇಖರ ಶೆಟ್ಟಿ |
| ತಂದೆಯ ಹೆಸರು | : | ಚಂದ್ರಶೇಖರ ಶೆಟ್ಟಿ |
| ವಯಸ್ಸು | : | 32 ವರ್ಷ |
| ಕೆಲಸ | : | ಶಿಲ್ಪಿ |
| ವಾಸ | : | ಮುರ್ಡೇಶ್ವರ, ಭಟ್ಕಳ |

**ದಿನಾಂಕಃ 16-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ದಿ. 18-10-2023 ರಂದು ಸುಮಾರು ಮಧ್ಯಾಹ್ನ 12.45 ಗಂಟೆಗೆ ನಾನು ಕೆಲಸ ಮುಗಿಸಿ ಊಟಕ್ಕೆ ಮನೆಯ ಕಡೆಗೆ ಹೋಗುತ್ತಿರುವಾಗ, ಚಾಸಾ-1 ರವರ ಬಾಡಿಗೆ ಮನೆಯ ಬಳಿ ಮುರ್ಡೇಶ್ವರ ಪೊಲೀಸರು ಪಂಚನಾಮೆಗಾಗಿ ಬಂದಿದ್ದು, ಪಂಚನಾಮೆ ಮಾಡಿ, ನನ್ನ ಸಹಿಯನ್ನು ಪಡೆದುಕೊಂಡರು ಹಾಗೂ ಫೋಟೊ ತೆಗೆದರು. ಯಾವ ಕಾರಣಕ್ಕಾಗಿ ಪಂಚನಾಮೆ ಮಾಡಿದರು ಎಂದು ನನಗೆ ಗೊತ್ತಿಲ್ಲ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-8 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-8(ಬಿ) ಎಂದು ಗುರುತಿಸಲಾಯಿತು. ಸದರಿ ಫೋಟೋವನ್ನು ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ-**

2. ದಿ. 18-10-2023 ರಂದು ಪಂಚನಾಮೆಗಾಗಿ ಬರುವಂತೆ ನನಗೆ ನೋಟಿಸ್ ನೀಡಿದ್ದರು ಎಂದರೆ ಸಾಕ್ಷಿಯು, ಸಹಿ ತೆಗೆದುಕೊಂಡರು ಎಂದು ನುಡಿಯುತ್ತಾರೆ. ನೋಟಿಸನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-25 ಎಂದು, ಸಾಕ್ಷಿಯ ಸಹಿಯನ್ನು ನಿಪಿ-25(ಎ) ಎಂದು ಗುರುತಿಸಲಾಯಿತು. ಸದರಿ ದಿನದಂದು ಚಾಸಾ-1 ರವರು ಸ್ಥಳದಲ್ಲಿ ಹಾಜರಿದ್ದು, ತಾನು ಬಾಡಿಗೆಗೆ ನೀಡಿದ್ದ ಮನೆಗಳನ್ನು ತೋರಿಸಿದ್ದರು ಎಂದರೆ ಸರಿ. ಅವುಗಳ ಪೈಕಿ ಒಂದು ಮನೆಯನ್ನು ಆರೋಪಿಗೆ ಬಾಡಿಗೆಗೆ ನೀಡಿದ್ದೆ ಎಂದು ತೋರಿಸಿದ್ದರು ಎಂದರೆ ಸರಿ. ಆರೋಪಿಯು ಬಾಡಿಗೆಗೆ ಇದ್ದ ಮನೆಯು ಕಾಯ್ಕಿಣಿ ಗ್ರಾಮ ಪಂಚಾಯತಿಯ ಮನೆಯ ನಂ. 95/2 ಆಗಿತ್ತು ಎಂದರೆ ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಸದರಿ ಪಂಚನಾಮೆಯನ್ನು ಬೆಳಿಗ್ಗೆ 12.00 ರಿಂದ 12.45 ಗಂಟೆಯವರೆಗೆ ಮಾಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್.ಕೆ.ಎಂ. ವಕೀಲರಿಂದಃ-**

3. ಪಂಚನಾಮೆಯಲ್ಲಿ ಏನೇನು ಬರೆದಿದ್ದರು ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನಿಂದ ಖಾಲಿ ಹಾಳೆಯ ಮೇಲೆ ಸಹಿ ಪಡೆದುಕೊಂಡಿರುತ್ತಾರೆ. ನಾನು ಊಟಕ್ಕೆ ಹೋಗುವಾಗ ಪೊಲೀಸರು ನನ್ನಿಂದ ಸಹಿಯನ್ನು ಪಡೆದುಕೊಂಡರು. ಪೊಲೀಸರು ನನ್ನಿಂದ ಸಹಿ ಪಡೆದುಕೊಂಡ ಸ್ಥಳದಲ್ಲಿ ಏನೇನು ಆಗಿತ್ತು ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಪೊಲೀಸರು ನಿಲ್ಲು ಎಂದು ಹೇಳಿದ ಮೇರೆಗೆ ನಾನು ನಿಂತಿದ್ದು, ಆಗ ಫೋಟೊ ತೆಗೆದಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
Sd/-
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ